ದಿನಾಂಕಃ 24-11-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎ.ಆರ್.ಎಮ್. ವಕೀಲರಿಂದಃ**

27. ಈ ದಿನ ಹಾಜರು ಮಾಡಿದ ದಾಖಲೆಯಾದ ಎಮ್.ಆರ್.ನಂ.H169 ನಮಗೆ ಸಂಬಂಧಿಸಿದ ಜಮೀನು ಸರ್ವೆ ನಂ.220/*/3 ಕ್ಕೆ ಸಂಬಂಧಿಸಿದ್ದು ಆಗಿದ್ದು, ಅದನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-14 ಎಂದು ಗುರುತಿಸಲಾಯಿತು. ಇನ್ನೊಂದು ದಾಖಲೆ ಎಮ್.ಆರ್.ನಂ.H159 ನಮಗೆ ಸಂಬಂಧಿಸಿದ ಜಮೀನು ಸರ್ವೆ ನಂ.220/*/3 ಕ್ಕೆ ಸಂಬಂಧಿಸಿದ್ದು ಆಗಿದ್ದು, ಅದನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-15 ಎಂದು ಗುರುತಿಸಲಾಯಿತು.

28. ಅದರಂತೆ ಅವಾರ್ಡ ನನ್ನ ಅಜ್ಜನಾದ ಶಿವಲಿಂಗಪ್ಪ ಮದಪ್ಪ ತೇಲಸಂಗ ಅವರ ಹೆಸರಿಗೆ ಆಗಿದೆ. ನಂತರದಲ್ಲಿ ನನ್ನ ತಾಯಿ, ನನ್ನ ಸಹೋದರಿ ಮತ್ತು ನನಗೆ ದಿನಾಂಕ 08.05.2018 ರಂದು ಖಾತೆ ಬದಲಾವಣೆ ಮಾಡಿದಂತೆ ಸದರಿ ಜಮೀನಿನ ಹಕ್ಕು ನನಗೆ ಸದರಿ ದಾಖೆಯ ನಿಪಿ-14 ರಂತೆ ಬಂದಿದೆ. ಅದರಂತೆ ನಿಪಿ-15 ನನ್ನ ತಾಯಿ ಮತ್ತು ಸಹೋದರಿ ನನಗೆ ದಿನಾಂಕ 15.03.2019 ರಂದು ಸದರಿ ಜಮೀನನ್ನು ನನ್ನ ಹೆಸರಿಗೆ ನೀಡಿರುತ್ತಾರೆ.

**ಪಾಟೀ ಸವಾಲುಃ 1 ಮತ್ತು 3ನೇ ಎದುರುದಾರ ಪರ ಡಿಜಿಪಿ ರವರಿಂದ**

29. ನನ್ನ ಅಜ್ಜ ಶಿವಲಿಂಗಪ್ಪ ಮದಪ್ಪ ತೇಲಸಂಗ ಅವರ ಮರಣ ದಾಖಲೆ ಇದೆ. ನನ್ನ ಅಜ್ಜನ ವಾರಸಾ ಪ್ರಮಾಣ ಪತ್ರ ಇದೆ. ಅದನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಲು ಯಾವುದೇ ತೊಂದರೆ ಇಲ್ಲ. ಸರ್ವೆ ನಂ.220/3 ಇದು ನನ್ನ ಅಜ್ಜನ ಹೆಸರಿನಲ್ಲಿ

ಇದ್ದು ಅವರ ಹೆಸರಿನಲ್ಲಿ ಅವಾರ್ಡ ಆಗಿದೆ ಎಂದರೆ ಸರಿ. ನನ್ನ ಅಜ್ಜನಿಗೆ ಒಬ್ಬ ಗಂಡು ಮಗ, ಇಬ್ಬರು ಹೆಣ್ಣು ಮಕ್ಕಳು. ನನ್ನ ತಂದೆಯವರು ಮರಣ ಹೊಂದಿರುತ್ತಾರೆ. ನನ್ನ ತಂದೆಯ ಮರಣ ಪ್ರಮಾಣ ಪತ್ರ ಮತ್ತು ವಾರಸಾ ಪ್ರಮಾಣ ಪತ್ರ ಇದೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ಯಾವುದೇ ತೊಂದರೆ ಇಲ್ಲ. ನನ್ನ ತಂದೆಗೆ ನಾವು ಇಬ್ಬರು ಗಂಡು ಮಕ್ಕಳು. ನನ್ನ ತಾಯಿ ಇದ್ದಾರೆ.

30. ನನ್ನ ಅಜ್ಜನ ಮರಣದ ನಂತರ ನನ್ನ ಅತ್ತೆ ಮತ್ತು ನನ್ನ ತಂದೆಯ ನಡುವೆ ಪಾಲು ವಾಟನಿ ಆಗಿಲ್ಲ. ನನ್ನ ತಂದೆಯ ಮರಣದ ನಂತರ ನನ್ನ ತಾಯಿ, ನನ್ನ ಅಣ್ಣ ಹಾಗೂ ನನ್ನ ನಡುವೆ ಪಾಲು ವಾಟನಿ ಆಗಿಲ್ಲ. ಸದರಿ ಜಮೀನು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಜಮೀನಿಗೆ ರೆಫರೆನ್ಸ ಅರ್ಜಿ ಸಲ್ಲಿಸಲು ನನ್ನ ತಾಯಿ, ನನ್ನ ಅಣ್ಣ, ನನ್ನ ಅತ್ತೆಯಂದಿರು ನನಗೆ ಯಾವುದೇ ಅಧಿಕಾರ ಪತ್ರ ನೀಡಿಲ್ಲ ಎಂದರೆ ಸರಿ.

31. ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ನನಗೆ ಸಂಪೂರ್ಣ ಅಧಿಕಾರ ಇರುವುದಿಲ್ಲ ಅಂತಾ ನನಗೆ ರೆಫರೆನ್ಸ ಅರ್ಜಿ ಸಲ್ಲಿಸುವ ಮುಂಚೆಯೇ ತಿಳಿದಿತ್ತು. ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಸಂಪೂರ್ಣ ಅಧಿಕಾರ ಇಲ್ಲ ಎಂದು ಗೊತ್ತಿದ್ದರೂ ಸಂಪೂರ್ಣ ಜಮೀನಿಗೆ ಸಂಬಂಧಿಸಿದಂತೆ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

32. ಎಸ್.ಎಲ್.ಎ.ಒ ರವರು ನಮಗೆ ನೀಡಿದ ಪರಿಹಾರದ ಮೊತ್ತ ಸರಿಯಾಗಿ ಇರುವ ಕಾರಣ ನಾವು ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಅವಾರ್ಡ ನನ್ನ ಹೆಸರಿಗೆ ಆಗದೇ ಇರುವ ಕಾರಣ ನಾನು ಹೆಚ್ಚಿನ ಪರಿಹಾರದ ಹಣ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**33. ಪಾಟೀ ಸವಾಲುಃ 2ನೇ ಎದುರುದಾರ ಪರ ಶ್ರೀ. ಎಲ್.ಟಿ.ಟಿ. ರವರಿಂದ**

2ನೇ ಎದುರುದಾರ ಪರ ವಕೀಲರು 1 ಮತ್ತು 2ನೇ ಎದುರುದಾರ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುತ್ತೇವೆ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಜಿಲ್ಲಾ ಮತ್ತು ಸತ್ರ ಶೆನ್ಸ ನ್ಯಾಯಾಧೀಶರು,
ಬೆಳಗಾವಿ.